ಹಿರಿಯ ಶ್ರೇಣಿ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ.ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿ. ಸಿ. 13 /2017

| | | |
|---|---|---|
| ಸಾಕ್ಷಿಯ ಹೆಸರು | ಃ ಹೆಚ್ ಗೋವಿಂದಯ್ಯ | ಪ್ರಾಸಾ- 1 |
| ತಂದೆಯ ಹೆಸರು | ಃ ಹೆಳವಯ್ಯ | |
| ವಯಸ್ಸು | ಃ 62 ವರ್ಷ | ಪ್ರಮಾಣೀಕರಿಸಲಾದ ದಿನಾಂಕಃ 23.9.2017 |
| ಉದ್ಯೋಗ | ಃ ನಿವೃತ್ತ ಅಧ್ಯಾಪಕರು | |
| ವಾಸಸ್ಥಳ | ಃ ಮೈಸೂರು | |

## ಮುಖ್ಯವಿಚಾರಣೆ ಪಿರ್ಯಾದಿ ಪರಃ ಶ್ರೀ ಎಸ್ ಎಸ್ ವಕೀಲರವರಿಂದಃ

ನಾನು ಮತ್ತು ಎಂ ಮರಿಸ್ವಾಮಿ ಭೂತಯ್ಯ ಕೆ ಸಮಿತ್ರಬಾಯಿ ಗೋಪಮ್ಮ ಆರ್ ಎಸ್ ದೊಡ್ಡಣ್ಣ ಮತ್ತು ಡಿವಿ ದೇಸಾಯಿ ಇಷ್ಟು ಜನರು ಸೇರಿ ಒಂದು ಶೈಕ್ಷಣಿಕ ಸಂಸ್ದೆಯನ್ನು ನಡೆಸಬೇಕೆಂಬ ಸದುದ್ದೇಶದಿಂದ 1986ನೇ ಸಾಲಿನಲ್ಲಿ ಮಿಳಿಂದ ವಿದ್ಯಾಸಂಸ್ದೆಯನ್ನು ಟ್ರಸ್ಟ್ ಆಗಿ ಪ್ರಾರಂಬ ಮಾಡಿರುತ್ತೇವೆ. ಇದರ ಪ್ರಮುಖ ಉದ್ದೇಶ ಅನಾಥ ಮತ್ತು ಬಢ ದಲಿತ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಬೇಕೆಂಬುದಾಗಿತ್ತು. ಈ ಸಂದರ್ಬದಲ್ಲಿ ನಮಗೆ ಪಿಪಟ್ಟಣ ತಾಃ ಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿ ಗಿರಗೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯವರು ಗ್ರಾಮಠಾಣಾದಲ್ಲಿ 4 ಎಕರೆ ಭೂಮಿಯನ್ನು ಶಾಲಾ ಪ್ರಾರಂಭ ಮಾಡುವ ಉದ್ದೇಶದಿಂದ 1989ರಲ್ಲಿ ಮಂಜೂರು ಮಾಡಿರುತ್ತಾರೆ. ನಾವು 1990 ರಲ್ಲಿ ಶಾಲೆಯನ್ನು ಪ್ರಾರಂಬಿಸಿರುತ್ತೇವೆ. ಶಾಲಾ ಚಟುವಟಿಕೆಯನ್ನು ಗಮನಿಸಿದ ಗ್ರಾಮ ಪಂಚಾಯಿತಿಯವರು ಸದರಿ 4 ಎಕರೆ ಹೊಂದಿಕೊಂಡಂತೆ ಇದ್ದ ಉಳಿಕೆ 5 ಎಕರೆ 9ಗುಂಟೆ ಜಮೀನನ್ನು ಪಂಚಾಯಿತಿ ನಡಾವಳಿ ಮೂಲಕ ನಿರ್ಣಯಿಸಿ ಮಂಜೂರು ಮಾಡಿರುತ್ತಾರೆ. ಸದರಿ ಶಾಲೆಯಲ್ಲಿ ಎಲ್‌ಕೆಜಿ ಯಿಂದ ಹತ್ತನೇ ತರಗತಿವರೆಗೆ 600 ಮಕ್ಕಳು ವಿದ್ಯಾಬ್ಯಾಸ ಮಾಡುತ್ತಿರುತ್ತಾರೆ. 18 ಜನ ಶಿಕ್ಷಕರು 4 ಜನ ಅಡಿಗೆಯವರು ಇಬ್ಬರು ವಾಹನ ಚಾಲಕರು ಒಬ್ಬ ಸೇವಕ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಸ್ದೆಯ 7ಜನ ಟ್ರಸ್ಟಿಗಳ ಪೈಕಿ ರಾವಂದೂರು ಗ್ರಾಮದ ಆರ್ ಎಸ್ ದೊಡ್ಡಣ್ಣ ರವರು ಶಿಕ್ಷಣ ಇಲಾಖೆಯಲ್ಲಿಕೆಲಸ ಮಾಡುತ್ತಿದ್ದುದರಿಂದ ಶಾಲಾ ನಿರ್ವಹಣೆಯ ಮತ್ತು ಹಣಕಾಸಿನ ನಿರ್ವಹಣೆಯನ್ನೂ ಸಹ ಎಲ್ಲಾದರ್ಮದರ್ಶಿಗಳ ಒಪ್ಪಿಗೆ ಸಹಮತದಿಂದ ನೇಮಿಸಿದ್ದೆವು. 2009ನೇ ಸಾಲಿವರೆಗೆ ಅವರು ಸದರಿ ಸಂಸ್ದೆಯ ಸಂಪೂರ್ಣ ವ್ಯವಹಾರವನ್ನು ನೋಡಿಕೊಂಡಿರುತ್ತಾರೆ. ಈ ಸಂದರ್ಬದಲ್ಲಿ 2006ನೇ ಸಾಲಿನಿಂದ ಸದರಿಯವರು ಶಾಲಾ ಮಕ್ಕಳಿಂದ ಮತ್ತು ಸಾರ್ವಜನಿಕರಿಂದ ಪಡೆದ ಹಣಕ್ಕೆ ರಶೀತಿ ಹಾಕದೇ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಅಂತ ಅನುಮಾನ ಬಂದ ಕಾರಣ ಶಾಲೆಯಲ್ಲಿ ಸಬೆ ನಡೆಸಿ ಸದರಿ ಆರ್ ಎಸ್

ದೊಡ್ಡಣ್ಣ ರವರಿಗೆ ಸಾರ್ವಜನಿಕರಿಂದ ಮತ್ತು ಶಾಲಾ ಮಕ್ಕಳಿಂದ ಪಡೆದ ಹಣಕ್ಕೆ ರಶೀದಿ ಹಾಕಬೇಕು ಮತ್ತು ಹಣ ಬ್ಯಾಂಕಿಗೆ ಜಮಾ ಆದ ಬಗ್ಗೆ ದಾಖಲೆ ಇಡಬೇಕು ಅಂತ ತಾಕೀತು ಮಾಡಿದೆವು. ಅದಕ್ಕೆ ಅವರು ಒಪ್ಪಿದ್ದರು ಅದರಂತೆ ಅವರು ಹಣ ಪಡೆದ ಬಗ್ಗೆ ರಶೀದಿ ಯಲ್ಲಿ ನಮೂದಿಸುವುದು ಮತ್ತು ಬ್ಯಾಂಕಿಗೆ ಕಟ್ಟುತ್ತಿರುತ್ತಾರೆ ಅನ್ನುವ ಭಾವನೆ ಹೊಂದಿದ್ದೆವು. ಮತ್ತು ಪ್ರತೀ ವರ್ಷ ಲೆಕ್ಕಪರಿಶೋದನೆ ಮಾಡಿಸುವಂತೆ ಹೇಳಿದ್ದೆವು ಆದರೂ ಸಹ ಅವರು ಆ ರೀತಿ ಅವರಿಗೆ ಒತ್ತಾಯ ಮಾಡಿದ 3 ವರ್ಷಗಳ ನಂತರವೂ ಸಹ ಹಣಕಾಸಿನ ಬಗ್ಗೆ ಲೆಕ್ಕಪರಿಶೋದನೆ ಮಾಡಿಸಿರುವುದಿಲ್ಲ. ಆದುದರಿಂದ ದಿಃ 19-2-10 ರಂದು ಸದರಿ ಟ್ರಸ್ಟ್‌ನ ವ್ಯವಸ್ಥಾಪಕ ದರ್ಮದರ್ಶಿಗಳಾದ ನಾವು ಆರೋಪಿಗೆ ನೋಟೀಸು ನೀಡಿ ಸಂಬಂದಿಸಿದ ಲೆಕ್ಕಪತ್ರಗಳನ್ನು ಹಾಜರುಪಡಿಸಿ ಸ್ಪಷ್ಟೀಕರಣ ನೀಡುವಂತೆ ಒತ್ತಾಯಿಸಿದೆವು. ಸದರಿ ನೋಟೀಸುಗೆ ಸ್ಪಂದಿಸದೇ ಹೆಚ್ಚಿನ ವಿವರಗಳು ಬೇಕು ಅಂತ ಪ್ರತ್ಯುತ್ತರದ ನೋಟೀಸು ನೀಡಿದರು ಅವರು ಪ್ರತ್ಯುತ್ತರದಲ್ಲಿ ಕೇಳಿದ ವಿವರಗಳಿಗೆ ನಾವು ಸಂಪೂರ್ಣ ಮಾಹಿತಿ ಒದಗಿಸಿಕೊಟ್ಟರು. ದಿಃ 1-4-10 ರಂದು ಮರುತ್ತರವನ್ನು ನೀಡಿ ವ್ಯವಸ್ಥಾಪಕ ದರ್ಮದರ್ಶಿಗಳ ವಿರುದ್ದ ಪ್ರತ್ಯಾರೋಪವನ್ನು ಮಾಡಿರುತ್ತಾರೆ. ದಿಃ 22-8-2010 ರಂದು ಸಂಸ್ಥೆಯ ಟ್ರಸ್ಟ್‌ನ ಎಲ್ಲಾ ದರ್ಮದರ್ಶಿಗಳ ಸಬೆಯನ್ನು ನಡೆಸಿದೆವು. ಮತ್ತು ಸದರಿ ಅವ್ಯವಹಾರದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾದೀಶರಿಂದ ತನಿಖೆ ನಡೆಸಬೇಕು ಅಂತ ಸರ್ವಾನುಮತದಿಂದ ತೀರ್ಮಾನಿಸಿ ಈ ಬಗ್ಗೆ ಕ್ರಮ ಜರುಗಿಸಲು ಸಂಬಂದಪಟ್ಟ ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ನೇಮಕಗೊಳಿಸುವ ಬಗ್ಗೆ ವ್ಯವಹರಿಸಲು ನಮ್ಮ ಸಂಸ್ಥೆಯ ಹಿರಿಯ ದರ್ಮದರ್ಶಿಗಳಾದ ಟಿ ವೈ ಭೂತಯ್ಯ ರವರಿಗೆ ಅಧಿಕಾರ ವಹಿಸಿಕೊಡಲಾಯಿತು. ಅದರಂತೆ ಸಿದ್ದೇಗೌಡ ನಿವೃತ್ತ ಜಿಲ್ಲಾ ನ್ಯಾಯಾದೀಶರು ರವರನ್ನು ತನಿಖಾದಿಕಾರಿಯಾಗುವಂತೆ ನೇಮಿಸಿರುತ್ತಾರೆ. ಸದರಿ ಸಿದ್ದೇಗೌಡ ರವರಿಗೆ ನಮ್ಮಸಂಸ್ಥೆಯ ಪೂರ್ಣದಾಖಲೆಗಳನ್ನು ವಹಿಸಿಕೊಟ್ಟೆವು ಅವರು ಅದನ್ನು ಪರಿಶೀಲಿಸಿ ಸಾಕ್ಷಿದಾರರ ಹೇಳಿಕೆ ಪಡೆದು ಆರೋಪಿಯಿಂದ ಮಾಹಿತಿ ಕಲೆ ಹಾಕಿ ಅವರ ಹೇಳಿಕೆ ಪಡೆದು ಅಂತಿಮವಾಗಿ ದಿನಾಂಕಃ 20-8-2011 ರಂದು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿ ಆರೋಪಿ ಆರ್ ಎಸ್ ದೊಡ್ಡಣ್ಣ ರವರು ಶಾಲೆಗೆ ಸಂಬಂದಿಸಿದ ಹಣಕಾಸಿನ ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸದೇ ಹಣವನ್ನು ಬ್ಯಾಂಕಿಗೆ ಸಂದಾಯ ಮಾಡದೇ ಸ್ವಂತಕ್ಕೆ ಬಳಸಿಕೊಂಡು ಲಕ್ಷಾಂತರ ರೂ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತ ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಆರೋಪಿಯು ಶಾಲಾ ಮಕ್ಕಳಿಂದ ಸಂಗ್ರಹಿಸಿದ ಶುಲ್ಕ ಮತ್ತು ವಾಹನ ಶುಲ್ಕಕ್ಕೆ ಸಂಬಂದಿಸಿದಂತೆ ಸುಮಾರು ರೂ 691962-00 ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಹಾಗೂ ಸಿ ಒ ಆರ್ ಡಿ (ಕೂರ್ಗ್

239

ಆರ್ಗನೈಸೇಷನ್ ಪಾರ್ ರೂರಲ್ ಡೆವಲಪ್‌ಮೆಂಟ್) ಸಂಸ್ಥೆಯಿಂದ ಬಂದ ರೂ 151350-00 ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಮತ್ತು ಕೊಪ್ಪ ಗ್ರಾಮದ ಅಲೆಮಾರಿ ಜನಾಂಗದ ಮುಖಂಡರಾದ ಧರ್ಮ ರವರು ನಮ್ಮ ಶಾಲಾ ಅಭಿವೃದ್ದಿಗಾಗಿ ನೀಡಿದ ರೂ 105000-00 ಗಳ ಹಣವನ್ನೂ ಸಹ ದುರುಪಯೋಗಪಡಿಸಿಕೊಂಡಿರುತ್ತಾರೆ. ಮತ್ತು ಶಾಲಾ ಆವರಣದಲ್ಲಿ ಶಾಲೆಗೆ ಸಂಬಂದಪಟ್ಟ ಜಮೀನಿನಲ್ಲಿ ಬೆಳೆದ ಫಸಲು ವಿವಿಧ ಹಣ್ಣುಗಳನ್ನು ಮಾರಾಟ ಮಾಡಿ ಬಂದ ಹಣ ಅಂದಾಜು ರೂ 650000-00 ಹಣಕ್ಕೆ ಸಂಬಂದಿಸಿದಂತೆ ರಶೀದಿ ಹಾಕದೇ ಲೆಕ್ಕಕ್ಕೆ ತೆಗೆದುಕೊಳ್ಳದೇ ದುರುಪಯೋಗಪಡಿಸಿಕೊಂಡಿರುತ್ತಾರೆ. ಅಲ್ಲದೆ ನಮ್ಮ ಸಂಸ್ಥೆಯಿಂದ ಪ್ರತೀವರ್ಷ ನಡೆಸುತ್ತಿದ್ದ ಕ್ರಿಕೆಟ್ ಟೂರ್ನಿ ಮತ್ತು ಶಾಲಾ ವಾರ್ಷಿಕೋತ್ಸವಕ್ಕೆ ಸಂಬಂದಿಸಿದಂತೆ ವಿದ್ಯಾರ್ತಿಗಳಿಂದ ಸಾರ್ವಜನಿಕರಿಂದ ಪಡೆದ ದೇಣಿಗೆ ಹಣಕ್ಕೆ ರಶೀತಿ ಹಾಕದೇ ಬ್ಯಾಂಕಿಗೆ ಕಟ್ಟದೇ ದುರುಪಯೋಗಪಡಿಸಿಕೊಂಡಿರುತ್ತಾರೆ ಲೆಕ್ಕಪರಿಶೋದನೆಗೆ ಮಾಹಿತಿ ಈ ಬಗ್ಗೆ ಒದಗಿಸಿರುವುದಿಲ್ಲ. ಅಲ್ಲದೇ ಬೈಲಕುಪ್ಪಾ ಟಿಬೇಟಿಯನ್ ಜನಾಂಗದ ಲಕ್ಪಾ ಡಿ ಲಾಮಾ ರವರು ಪ್ರತೀ ತಿಂಗಳು ರೂ 2000-00 ರಂತೆ 1997ನೇ ಸಾಲಿನಿಂದ ಸತತವಾಗಿ ಸಂಸ್ಥೆಗೆ ದೇಣಿ ನೀಡುತ್ತಾ ಬಂದಿದ್ದು ಸದರಿ ಹಣಕ್ಕೂ ರಶೀದಿ ಹಾಕದೇ ಬ್ಯಾಂಕಿಗೆ ಕಟ್ಟದೇ ಲೆಕ್ಕಪರಿಶೋದನೆಗೆ ಮಾಹಿತಿ ಒದಗಿಸದೇ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.

ಇದಲ್ಲದೆ ನಾವು ವಿಶ್ವಾಸ ಇಟ್ಟ ಶಾಲಾ ನಿರ್ವಹಣೆ ಜವಾಬ್ದಾರಿಯನ್ನ ಕೊಟ್ಟದ್ದಂತಹ ಆರ್ ಎಸ್ ದೊಡ್ಡಣ್ಣ ನಮ್ಮ ಸಂಸ್ಥೆ ಗಮನಕ್ಕೆ ಬಾರದ ಹಾಗೆ ಆರು ಜನ ಪ್ರಾತಮಿಕ ಶಾಲಾ ಶಿಕ್ಷಕರುಗಳಿಂದ ತಲಾ ಒಂದುಲಕ್ಷ ರೂ. ಗಳನ್ನು ಶಾಲಾ ವಾಹನ ಖರೀದಿಗಾಗಿ ಎಂದು ಒತ್ತಾಯಪೂರ್ವಕವಾಗಿ ಹಣ ಸಂಗ್ರಹ ಮಾಡಿರುತ್ತಾರೆ. ಇದಕ್ಕೆ ಯಾವುದೇ ರಶೀದಿ ಹಾಕಿರುವುದಿಲ್ಲ ಮತ್ತು ಸದರಿ ಹಣವನ್ನು ಬ್ಯಾಂಕಿಗೆ ಜಮೆ ಮಾಡಿರುವುದಿಲ್ಲ. ಆರು ಜನ ಶಿಕ್ಷಕರಾದ ಜಲಜಾಕ್ಷಿ, ಹೇಮಾವತಿ, ಗೀತಾ, ಸುರೇಶಕುಮಾರ, ಕೃಷ್ಣ ರವರುಗಳಿಂದ ಉದ್ಯೋಗವನ್ನು ಖಾಯಂಗೊಳಿಸುವ ಆಮಿಷ ಒಡ್ಡಿ ತಲಾ ಐದು ಲಕ್ಷ ರೂ ಕೊಡಬೇಕು ಅಂತ ಒತ್ತಾಯ ಮಾಡಿರುವುದುತಿಳಿದು ಬಂತು ಈ ಆರು ಜನ ಶಿಕ್ಷಕರು ನಮ್ಮ ಆಡಳಿತ ಮಂಡಳಿಗೆ ಪತ್ರ ಬರೆದು ನಮ್ಮನ್ನು ಹೀಗೆ ಒತ್ತಾಯ ಮಾಡಿ ತಲಾ ಐದು ಲಕ್ಷ ಕೊಡದೇ ಇದ್ದರೆ ಕೆಲಸದಿಂದ ತೆಗೆದು ಹಾಕುವ ವಿಚಾರವನ್ನು ತಿಳಿಸಿರುತ್ತಾರೆ. ಆರೋಪಿಯು ನಾವು ಸದುದ್ದೇಶದಿಂದ ಪ್ರಾರಂಬಿಸಿದ ಶಿಕ್ಷಣ ಸಂಸ್ಥೆಗೆ ಕೆಟ್ಟ ಹೆಸರು ತರಿಸುವ ಉದ್ದೇಶದಿಂದ ಈ ರೀತಿ ಮಾಡಿರುತ್ತಾರೆ. ಶಾಲಾ ವಾಹನ ಖರೀದಿಗಾಗಿ ಹೆಚ್‌ಎಫ್‌ಡಿಸಿ ಬ್ಯಾಂಕ್ ಮೈಸೂರು ಶಾಖೆ ಯಿಂದ ಸಾಲ ಪಡೆದಿದ್ದೆವು. ಈಗ್ಗೆ ಶಿಕ್ಷಕರಿಂದ ಹಣ ಸಂಗ್ರಹ ಮಾಡಿದ್ದರೂ ಕೂಡ ಶಾಲಾ ವಾಹನದ ಸಾಲದ ಕಂತುಗಳನ್ನು ಸರಿಯಾಗಿ ಪಾವತಿಸಿರುವುದಿಲ್ಲ.

ಇದರ ಪರಿಣಾಮ ಸದರಿ ಬ್ಯಾಂಕಿನಿಂದ ಅಮಾನ್ಯತಗೊಂಡ ಚೆಕ್ಕುಗಳನ್ನು ನಮ್ಮ ಸಂಸ್ಥೆಗೆ ಬಂದಿರುತ್ತವೆ. ಸದರಿ ಹಣವನ್ನು ಸಂಸ್ಥೆಯು ಪಾವತಿ ಮಾಡಬೇಕಾಯಿತು. ಶಾಲಾ ವಾಹನದ ದಾಖಲೆಗಳಾದ ವಿಮೆ, ಆರ್‌ಸಿ ಪುಸ್ತಕ ತರಿಗೆ ಸಂಬಂದಿಸಿದ ದಾಖಲೆಗಳನ್ನೂ ಕೂಡ ಆರೋಪಿಯೇ ಇಟ್ಟುಕೊಂಡು ಸಂಸ್ಥೆಗೆ ಕೊಡದೇ ತೊಂದರೆ ಕೊಟ್ಟಿರುತ್ತಾರೆ. 1992 ರಲ್ಲಿ ನಾವುವಸತಿ ಶಾಲಾ ಉದ್ದೇಶಕ್ಕೋಸ್ಕರ ಹತ್ತು ಸಾವಿರ ರೂ.ಗಳ ಅಡಿಗೆ ಪಾತ್ರೆ ಮತ್ತು ಊಟಕ್ಕೆ ಸಂಬಂದಿಸಿದ ಪಾತ್ರೆಗಳನ್ನು ಕೊಂಡುಕೊಂಡಿದ್ದನ್ನು ಆರೋಪಿ ತಮ್ಮ ಮನೆಯಲ್ಲಿಟ್ಟುಕೊಂಡು ಶಾಲಾ ಚಟುವಟಿಕೆ ಉದ್ದೇಶಕ್ಕೆ ನೀಡದೇ ದುರುಪಯೋಗಪಡಿಸಿಕೊಂಡಿರುತ್ತಾರೆ. ಈಗೆ ಪಾತ್ರೆಗಳಿದ್ದಾಗ್ಯೂ ಪ್ರತೀ ವರ್ಷ ನಡೆಯುವ ಶಾಲಾ ವಾರ್ಶಿಕೋತ್ಸವ ಮತ್ತು ಕ್ರಿಕೆಟ್‌ಟೂರ್ನಿಮೆಂಟ್ ಕಾರ್ಯಕ್ರಮಗಳ ಸಂದರ್ಬದಲ್ಲೂ ಸಹಾ ಪಾತ್ರೆಗಳನ್ನು ನೀಡದೇ ಬಾಡಿಗೆಗೆ ಪಡೆದು ಶಾಲಾ ಚಟುವಟಿಕೆಗಳನ್ನು ನಡೆಸಿ ಸಂಸ್ಥೆ ಬಾಡಿಗೆ ಕಟ್ಟುವಂತೆ ಮಾಡಿರುತ್ತಾರೆ. 2010ನೇ ಸಾಲಿನಲ್ಲಿ ಸರ್ಕಾರ ನಮ್ಮ ಸಂಸ್ಥೆಗೆ ಬಿಸಿಯೂಟದ ಕಾರ್ಯಕ್ರಮ ಏರ್ಪಡಿಸಿತ್ತು. ಆ ಸಂದರ್ಬದಲ್ಲಿ ಆರೋಪಿ ಪಾತ್ರೆ ಕೊಡದೇ ತೊಂದರೆ ಕೊಟ್ಟದ್ದರಿಂದ ನಮ್ಮ ಸಂಸ್ಥೆ ಬಾಡಿಗೆಗೆ ಪಾತ್ರೆಗಳನ್ನು ಪಡೆದು ಸದರಿ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಯಿತು. ಇದರಿಂದಲೂ ಸಹಾ ಸಂಸ್ಥೆಗೆ ಹಣಕಾಸಿನ ನಷ್ಟ ಉಂಟಾಗಿರುತ್ತದೆ. ಕ್ರಿಕೆಟ್‌ಟೂರ್ನಿಮೆಂಟ್ ಮತ್ತು ಶಾಲಾ ವಾರ್ಶಿಕೋತ್ಸವವನ್ನು ವೋಟಾ ಫಾರ್ಮ ಮಾಲೀಕರಾದ ಅಶ್ರಪ್ ರವರ ಸಹಾಯ ಧನದ ಮೂಲಕ ನಡೆಯುತ್ತಿತ್ತು. ಅವರಿಂದ ಪಡೆದ ಸಹಾಯ ಧನಕ್ಕೂ ಆರೋಪಿ ರಶೀದಿ ಹಾಕದೇ ಬ್ಯಾಂಕಿಗೆ ಜಮಾ ಮಾಡದೇ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಮತ್ತು ಇದಕ್ಕೆಸಂಬಂದಿಸಿದ ಲೆಕ್ಕಪತ್ರಗಳನ್ನು ನಮಗೆ ನೀಡಿರುವುದಿಲ್ಲ. 2009 ರಿಂದ ಆರೋಪಿಗೆ ನೋಟೀಸು ಕೊಟ್ಟ ನಂತರ ಶಾಲಾ ನಿರ್ವಶಹಣೆಗೆ ಸಂಬಂದಪಟ್ಟಂತೆ ಬೇರೆ ವ್ಯವಸ್ಥೆ ಮಾಡಿ ಶಾಲೆಗೆ ಬರುವಂತೆ ಪ್ರತೀ ಹಣಕ್ಕೆ ರಶೀದಿ ಹಾಕುವಂತದ್ದು ಮತ್ತೆ ಬಂದ ಹಣವನ್ನು ಬೈಲಕುಪ್ಪೆಯ ಸಿಂಡಿಕೇಟ್ ಬ್ಯಾಂಕಿಗೆ ಜಮೆಮಾಡುವಂತಹ ಎಲ್ಲಾ ಮಾಹಿತಿಯನ್ನು ಲೆಕ್ಕ ಪರಿಶೋದನೆಗೆ ಒಪ್ಪಿಸುವಂತಹದ್ದನ್ನು ನಾವು ಆರಂಬಿಸಿರುತ್ತೇವೆ. ಸದರಿ ನಿರ್ವಹಣೆಯಜವಾಬ್ದಾರಿಯನ್ನು ಶಾಲಾ ಶಿಕ್ಷಕರಾದ ಆಶಾ ರವರಿಗೆ ವಹಿಸಿರುತ್ತೇವೆ. ಇದನ್ನು ಆರೋಪಿ ಪ್ರತಿರೋಧಿಸಿ ಸದರಿ ಶಿಕ್ಷಕರು ಮತ್ತು ಇತರೆ ಶಿಕ್ಷಕರಿಗೆ ಅವಾಚ್ಯ ಶಬ್ದಗಳಿಂದ ಬೈದು ಬ್ಯಾಂಕಿಗೆ ಹಣ ಕಟ್ಟಕೂಡದು ಹಾಗೂ ಹಣಕ್ಕೆ ರಶೀದಿ ಹಾಕದಂತೆ ದೌರ್ಜನ್ಯ ಎಸಗಿ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿ, ಹೆಂಡತಿ ಅವರ ಮಾವ ಮತ್ತು ಆರೋಪಿ ಭಾವ ಇವರೆಲ್ಲರೂ ಸೇರಿ ಕೃಷ್ಣ ಮತ್ತು ಸುರೇಶ ಅನ್ನುವ ಶಿಕ್ಷಕರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ಸದರಿ ಶಿಕ್ಷಕರು ಸಂಬಂದಪಟ್ಟ ಪೋಲೀಸ್

239

ಠಾಣೆಗೆ ಹಾಗೂ ಸಂಸ್ಥೆಗೆ ಲಿಖಿತ ಮೂಲಕ ದೂರುಕೊಟ್ಟಿರುತ್ತಾರೆ. ದಿಃ 20-11-10 ರಲ್ಲಿ ಆರೋಪಿಯು ಎಸಗಿದ ಅವ್ಯವಹಾರ, ಹಣ ದುರುಪಯೋಗ, ಶಿಕ್ಷಕರ ಮೇಲೆ ನಡೆಸಿದದೌರ್ಜನ್ಯ ಈ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರು ರವರಿಗೆ ವಹಿಸಿ, ನಂತರ ಅವರು ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಂತೆ ಆರೋಪಿ ಮೇಲಿನ ಎಲ್ಲಾ ಆರೋಪಿಗಳು ರುಜುವಾತಾಗಿದ್ದುದರಿಂದ ಆರೋಪಿ ವಿರುದ್ದ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಬೇಕು ಅಂತ ನಮ್ಮ ಸಂಸ್ಥೆಯ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿದ ಮೇರೆಗೆ ಬೈಲಕುಪ್ಪೆ ಪೋಲೀಸ್ ಠಾಣೆಗೆ ಆರೋಪಿ ವಿರುದ್ದ ದೂರು ಸಲ್ಲಿಸಿರುತ್ತೇವೆ. ಸಾಕ್ಷಿಗೆ ಈಗ ಸದರಿ ದೂರು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿ1 ಅದರಲ್ಲಿರುವ ಸಾಕ್ಷಿ ಸಹಿಯನ್ನು 1ಎ ಎಂದು ಗುರುತಿಸಲಾಯಿತು.

ಮಿಳಿಂದ ವಿದ್ಯಾ ಸಂಸ್ಥೆ ಟ್ರಸ್ಟ್ ರವರು ಆರೋಪಿತನ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸುವುಕ್ಕಿಂತ ಮೊದಲು ತನಿಖೆ ನಡೆಸುವಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಹಿಸಿಕೊಟ್ಟ ಬಗೆಗಿನ ದಿಃ 02-10-2010, 1-11-2010, 2-11-2010, 3-11-2010, 20-11-2010, 23-4-2011, 28-4-2011 ದಿನಾಂಕಗಳ ಏಳು ಪತ್ರಗಳು ಇವುಗಳನ್ನ ಒಟ್ಟಾರೆ ನಿಪಿ1(ಬಿ) ಎಂದು ಗುರುತಿಸಲಾಯಿತು. ನಿವೃತ್ತ ಜಿಲ್ಲಾ ನ್ಯಾಯಾದೀಶರಾದ ಸಿದ್ದೇಗೌಡರಿಗೆ ವಿಚಾರಣೆ ನಡಸಿಕೊಡುವ ಸಲುವಾಗಿ ದಾಖಲ ನೀಡಿರುವ ಬಗ್ಗೆ ದಿಃ 20-11-2010ರ ಪತ್ರ ಹಾಗೂ ಅದಕ್ಕೆ ಲಗತ್ತಿಸಿದಂತೆ ಹಾಜರ್ಪಡಿಸಿರುವ ಸಾಕ್ಷಿದಾರರ ಪಟ್ಟಿ ಒಟ್ಟು 10 ಹಾಳೆಗಳ ದಾಖಲೆಯನ್ನ ನಿಪಿ2 ಎಂದು ಗುರುತಿಸಲಾಯಿತು. 1986 ರಿಂದ 2009ರ ವರೆಗಿನ ಲೆಕ್ಕಪರಿಶೋಧನಾ ವರದಿ ಒಟ್ಟು 65 ಪುಟಗಳಿದ್ದು ಅದನ್ನು ನಿಪಿ3 ಎಂದು ಗುರುತಿಸಲಾಯಿತು. ದಿಃ 16-1-2010ರಂದು ಲೆಕ್ಕಪರಿಶೋಧರಾದ ನಾಗಾನಂದ ರವರು ನೀಡಿರುವ ವರದಿ ನಿಪಿ4 ಎಂದು ಗುರುತಿಸಲಾಯಿತು. ದಿಃ 21-2-2011 ರಂದು ಆರೋಪಿತನು ಲೆಕ್ಕಪರಿಶೋಧಕರಾದ ನಾಗಾನಂದ ರವರಿಗೆ ಆಡಿಟ್‌ಗೆ ಬೇಕಾದ ಮಾಹಿತಿಗಳನ್ನ ಒದಗಿಸುತ್ತೇನೆಂದು ಮತ್ತು ತಾವು ತಿಳಿಸಿದಂತೆ ಬೇರೊಂದು ಸಂಸ್ಥೆಯ ಆಡಿಟ್ ವರದಿಯ ಜೆರಾಕ್ಸ್ ಪ್ರತಿ ಕಳುಹಿಸಿಕೊಡುತ್ತೇನೆ ಅಂತ ಬರೆದು ಪತ್ರ ಮತ್ತು ಅದಕ್ಕೆ ಲಗತ್ತಿಸಿದ ಜೆರಾಕ್ಸ್ 1994-95 ರಿಂದ 2004ನೇ ಸಾಲಿನ ವರೆಗೆ ಆಯವ್ಯಯಕ್ಕೆ ಸಂಬಂದಿಸಿದ ಆರೋಪಿತನ ಕೈಬರಹದ ಒಂಭತ್ತು ಹಾಳೆಗಳ ಲೆಕ್ಕಪತ್ರಗಳು - ಇವುಗಳನ್ನ ನಿಪಿ5 ಎಂದು ಗುರುತಿಸಲಾಯಿತು. ಮಿಳಿಂದ ವಿದ್ಯಾಸಂಸ್ತೆಯ ನಡಾವಳಿ ಪುಸ್ತಕ -1 ರ (ಒಟ್ಟು ಪುಟ 1 ರಿಂದ 176 ವರೆಗೆ ಇರುತ್ತದೆ) ಪುಟ 81ರ ವರೆಗೆ ಬೆಸ ಸಂಖ್ಯೆಯ ಪುಟಗಳಲ್ಲಿ ಬರವಣಿಗೆ ಮಾಡಿರುತ್ತಾರೆ. ಇದನ್ನ ನಿಪಿ6 ಎಂದು ಗುರುತಿಸಲಾಯಿತು. ದಿಃ 9-12-2009 ರಂದು ಇಟ್ಟಿರುವ ಪುಟ 1 ರಿಂದ 72 ಇರುವ

ಮಿಳಿಂದ ವಿದ್ಯಾಸಂಸ್ತೆಯ ಸಭಾ ನಡಾವಳಿ ಪುಸ್ತಕ ಇದರಲ್ಲಿ ಪುಟ 1 ರಿಂದ 11 ವರೆಗೆ ಬರವಣಿಗೆ ಆಗಿರುತ್ತದೆ. ಸದರಿ ಪುಸ್ತಕವನ್ನ ನಿಪಿ7 ಎಂದು ಗುರುತಿಸಲಾಯಿತು. ಮಿಳಿಂದ ವಿದ್ಯಾಸಂಸ್ತೆಯವರು ದಿಃ 14-12-2009 ರಂದು ಹೊರಡಿಸಿದ್ದ ಸುತ್ತೋಲೆ (ಐದು ಹಾಳೆಗಳ ಸುತ್ತೋಲೆ) ನಿಪಿ8 ಎಂದು ಗುರುತಿಸಲಾಯಿತು. ಆರೋಪಿತನಿಗೆ ಮಿಳಿಂದ ವಿದ್ಯಾಸಂಸ್ತೆಯವರು ವಿವರಣೆ ಕೇಳಿ ನೀಡಿದ ಪತ್ರ (ಐದು ಪುಟಗಳ ಪತ್ರ ) ಅದನ್ನು ಕಳಿಸಿದ ಬಗ್ಗೆ ಸಿಒಪಿ ರಶೀದಿ ಮತ್ತು ಆರ್‌ಪಿಎಡಿ ರಶೀದಿ ಹಾಗೂ ಅದು ಜಾರಿಯಾದ ಬಗ್ಗೆ ಅಂಚೆ ರಶೀದಿ ಇವುಗಳನ್ನು ಒಟ್ಟಾರೆ ನಿಪಿ9 ಎಂದು ಗುರುತಿಸಲಾಯಿತು. ಆರೋಪಿತನು ನನಗೆ ಮಾಹಿತಿ ಮತ್ತು ದಾಖಲೆಗಳನ್ನು ಟ್ರಸ್ಟ್‌ನ ಸಬೆಯಲ್ಲಿಟ್ಟು ಚರ್ಚಿಸಬೇಕೆಂದು ಕೋರಿ ಬರೆದ ಪತ್ರ ಮತ್ತು ಅದಕ್ಕೆ ಸಂಬಂದಿಸಿದ ಲಕೋಟೆ ನಿಪಿ10 ಎಂದು ಗುರುತಿಸಲಾಯಿತು. ದಿಃ 8-3-2010 ರಂದು ಆರೋಪಿತನಿಗೆ ವಿವರಣೆ ನೀಡುವ ಸಲುವಾಗಿ 120ಪುಟಗಳ ವಿವರಣೆ ನೀಡಿದ ಪತ್ರ ಮತ್ತು ಅಂಚೆ ರಶೀದಿ ನಿಪಿ11 ಎಂದು ಗುರುತಿಸಲಾಯಿತು. ಮಿಳಿಂದ ವಿದ್ಯಾಸಂಸ್ತೆಯ ಬ್ಯಾಂಕ್ ಆಪ್ ಮಹಾರಾಷ್ಟ್ರದ ಎರಡು ಪಾಸ್ ಪುಸ್ತಕಗಳು ನಿಪಿ12 ಮತ್ತು ನಿಪಿ13 ಎಂದು ಗುರುತಿಸಲಾಯಿತು. ಮತ್ತು ದಿಃ 7-11-07 ರಂದು ಬ್ಯಾಂಕಿನಿಂದ ಪಡೆದುಕೊಂಡ ದಿಃ 15-5-07 ರಿಂದ 6-11-07 ವರೆಗಿನ ಬ್ಯಾಂಕಿನ ಸ್ಟೇಟ್‌ಮೆಂಟ್ ನಿಪಿ14 ಎಂದು ಗುರುತಿಸಲಾಯಿತು. ಅದೇ ರೀತಿ ಸಿಂಡಿಕೇಟ್ ಬ್ಯಾಂಕ್ ಬೈಲಕುಪ್ಪೆ, ನಲ್ಲಿ ಪ್ರಾತಮಿಕ ಶಾಲೆ ಮಿಳಿಂದ ವಿದ್ಯಾಸಂಸ್ತೆ ಮತ್ತು ಪ್ರೌಡ ಶಾಲೆಗೆ ಸಂಬಂದಿಸಿದಂತೆ ಬ್ಯಾಂಕ್ ವ್ಯವಹಾರದ ಸ್ಟೇಟ್‌ಮೆಂಟ್ ನಿಪಿ15 ಎಂದು ಗುರುತಿಸಲಾಯಿತು. ಹೆಚ್‌ಡಿಎಪ್‌ಸಿ ಬ್ಯಾಂಕ್, ಮೈಸೂರು ಸರಸ್ವತಿಪುರಂ ರಲ್ಲಿ ವಾಹನ ಸಾಲ ಪಡೆದ ಬಗ್ಗೆ ರಶೀದಿ, ಮತ್ತು ಸ್ಟೇಟ್‌ಮೆಂಟ್‌ನ ನಕಲು, ನಿಪಿ16 ಎಂದು ಗುರುತಿಸಲಾಯಿತು. ಹೆಚ್‌ಡಿಎಪ್‌ಸಿ ಬ್ಯಾಂಕಿನವರು ಮಿಳಿಂದ ವಿದ್ಯಾಸಂಸ್ತೆ ರವರು ದಿಃ 3-11-09ರಂದು ನೀಡಿದ ನೋಟೀಸು ನಿಪಿ17 ಎಂದು ಗುರುತಿಸಲಾಯಿತು. ಆರೋಪಿತನ ವಿರುದ್ದ ಮಿಳಿಂದ ಹಿರಿಯ ಪ್ರಾ ಶಾಲೆಯಶಿಕ್ಷಕರು ನೀಡಿದ ದೂರು ಮತ್ತು ಅಂಚೆ ಲಕೋಟೆ, ನಿಪಿ18 ಎಂದು ಗುರುತಿಸಲಾಯಿತು. ಮಿಳಿಂದ ವಿದ್ಯಾಸಂಸ್ತೆಯ ಶಿಕ್ಷಕ ವರ್ಗದವರು ದಿಃ 7-4-11 ರಂದು ಎಸ್‌ಎಂ ಅಶ್ರಪ್ ಮತ್ತು ಕುಟುಂಬ ಸಹಾಯದಿಂದ ಕ್ರಿಕೆಟ್ ಪಂದ್ಯಾವಳಿ ನಡೆಸಿಕೊಂಡ ಬರುತ್ತಿದ್ದ ಬಗ್ಗೆ ನಿಪಿ19 ಎಂದು ಗುರುತಿಸಲಾಯಿತು. ಸಿಪಿ ಹೇಮಾವತಿ ದಾಸ್ತಾನು ಸಹಾಯಕಿ ಹಾಗೂ ಇತರೆ ಶಿಕ್ಷಕರು ಮಿಳಿಂದ ವಿದ್ಯಾಸಂಸ್ತೆ ದಿಃ 30-1-10 ರಂದು ಆರೋಪಿತನ ವಿರುದ್ದ ನೀಡಿರುವ ದೂರು ಪತ್ರಗಳು (133 ಪುಟಗಳು) ನಿಪಿ20 ಎಂದು ಗುರುತಿಸಲಾಯಿತು.

ಪ್ರಾಸಾ- 1

ಆರೋಪಿತನಿಂದ ದಿಃ 17-3-10ರಂದು ನನಗೆ ಮಾಹಿತಿ ಒದಗಿಸುವಂತೆ ಕೋರಿದ ಪತ್ರ ಮತ್ತು ಅದಕ್ಕೆ ಲಗತ್ತಿಸಿದ ಲಕೋಟೆ ನಿಪಿ21 ಎಂದು ಗುರುತಿಸಲಾಯಿತು. 27-3-10 ರಂದು ಆರೋಪಿತನಿಗೆ ಮಿಳಿಂದ ವಿ ಸಂ ರಿಂದ ಕಳುಹಿಸಿದ 3 ಪುಟಗಳ ನೋಟೀಸು ಮತ್ತು ಅದಕ್ಕೆ ಲಗತ್ತಿಸಿದ ಅಂಚೆ ರಶೀದಿ ನಿಪಿ22 ಎಂದು ಗುರುತಿಸಲಾಯಿತು. ಆರೋಪಿತನು ದಿಃ 1-4-10 ರಂದು ನೀಡಿರುವ 10 ಪುಟಗಳ ಮರುತ್ತರದ ನೋಟೀಸು ಮತ್ತು ಅದಕ್ಕೆ ಲಗತ್ತಿಸಿದ ಹಣಕಾಸಿನ ಲೆಕ್ಕಪತ್ರ ಜೆರಾಕ್ಸ್ ಪ್ರತಿಗಳು ಮತ್ತು ಲಕೋಟೆ ನಿಪಿ23 ಎಂದು ಗುರುತಿಸಲಾಯಿತು. ದಿಃ 22-8-10 ರಂದುಮಿಳಿಂದ ವಿ ಸಂ ಯಲ್ಲಿ ಧರ್ಮದರ್ಶಿಗಳ ಸಬೆ ನಡೆಸುವ ಬಗ್ಗೆ ನೀಡಿದ ನೋಟೀಸು ನಿಪಿ24 ಎಂದು ಗುರುತಿಸಲಾಯಿತು. ನಾನು ಆರೋಪಿತನ ವಿರುದ್ದ ದರ್ಮದರ್ಶಿಗಳಿಗೆ ನೀಡಿದ ಮಾಹಿತಿ ಮತ್ತು ಇದಕ್ಕೆ ಲಗತ್ತಿಸಿದ ಹಣಕಾಸಿನ ವ್ಯವಹಾರದ ಪತ್ರಗಳು ನಿಪಿ25 ಎಂದು ಗುರುತಿಸಲಾಯಿತು. ಜಿಲ್ಲಾ ತೋಟಗಾರಿಕೆಅದಿಕಾರಿಗಳು ಮೈಸೂರು ರವರಿಗೆ ದಿಃ 8-7-1991 ರಂದು ಶಾಲಾ ಆವರಣದಲ್ಲಿ ತೆಂಗು ಮತ್ತು ಹಣ್ಣಿನ ಸಸಿಗಳನ್ನು ನೆಡಲು ಸಲ್ಲಿಸಿದ ಮನವಿ ಮತ್ತು ತೋಗಾರಿಕೆ ಇಲಾಖೆ ನೀಡಿದ ವಿವರ ಮತ್ತು ಅರಣ್ಯ ಸಂರಕ್ಷಣಾದಿಕಾರಿಗಳಿಗೆ ಗಿಡಗಳಿಗೆ ಬೇಲಿ ಹಾಕಿಸಿಕೊಡಲು ಕೋರಿದ ಪ್ರತಿ ನಿಪಿ26 ಎಂದು ಗುರುತಿಸಲಾಯಿತು. ದಿಃ 3-4-05ರ ಪ್ರಜಾವಾಣಿ ಪತ್ರಿಕೆಯಲ್ಲಿ ಸಂಸ್ಥೆ ಬಗ್ಗೆ ಪ್ರಕಟವಾದ ಪ್ರತಿ ನಿಪಿ27 ಎಂದು ಗುರುತಿಸಲಾಯಿತು. ಆರೋಪಿತನು ಮಾಡಿರುವ ಪ್ರತಾರೋಪಗಳಿಗೆ ಸ್ಪಷ್ಟೀಕರಣ ನೀಡುವ ಬಗ್ಗೆ ಮತ್ತು ಈ ಬಗ್ಗೆ ಮಾಹಿತಿ ಮತ್ತು ದಾಖಲೆಗಳನ್ನ ಶ್ರೀ ಸಿದ್ದೇಗೌಡ ನಿವೃತ್ತ ಜಿಲ್ಲಾ ನ್ಯಾಯಾದೀಶರು ರವರಿಗೆ ನೀಡಿದ ಪತ್ರ ಮತ್ತು ದಾಖಲೆಗಳು (ಒಟ್ಟು 62 ಪುಟಗಳು) ನಿಪಿ28 ಎಂದು ಗುರುತಿಸಲಾಯಿತು. ಆರೋಪಿತನ ಮಾವ ಮಿಳಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಪಡಿಸಿದ ಬಗ್ಗೆ ಬೈಲಕುಪ್ಪೆ ಪೋಲೀಸ್‌ಗೆ ನೀಡಿದ ದೂರಿನ ಪ್ರತಿ ಹಾಗೂ ಪೋಲೀಸ್‌ರು ನೀಡಿದ ಹಿಂಬರಹ ಮತ್ತು ಕೆಡಿ ಕೃಷ್ಣ ಮತ್ತು ಶಿಕ್ಷಕ ವೃಂದದವರುರವರು ಸದರಿ ಆರೋಪಿತನ ಮಾವ ಮಾಡುತ್ತಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ನೀಡಿದ ದೂರು ನಿಪಿ29 ಎಂದು ಗುರುತಿಸಲಾಯಿತು. ದರ್ಮದರ್ಶಿಗಳ ಸಬೆಗೆ ರಕ್ಷಣೆ ಒದಗಿಸುವಂತೆ ಬೈಲಕುಪ್ಪೆ ಪಿಎಸ್‌ಐ ರವರಿಗೆ ನೀಡಿದ ದೂರಿನ ಪ್ರತಿ ಹಾಗೂ ಸಬಾ ನೋಟೀಸು ನಿಪಿ 30 ಎಂದು ಗುರುತಿಸಲಾಯಿತು. ಹೆಚ್‌ಡಿಎಪ್‌ಸಿ ಸರಸ್ವತಿಪುರಂ ಮೈಸೂರು ವ್ಯವಸ್ತಾಪಕರಿಗೆ ನೀಡಿದ ದಿಃ 29-10-10ರ ನೋಟೀಸು ನಿಪಿ31 ಎಂದು ಗುರುತಿಸಲಾಯಿತು. 2003-04ನೇಸಾಲಿನ ಮಿಳಿಂದ ಪ್ರೌಢ ಶಾಲಾ ಪರೀಕ್ಷಾ ಶುಲ್ಕ ನಿರ್ವಹಣೆಯ ಪುಸ್ತಕ ನಿಪಿ32 ಎಂದು ಗುರುತಿಸಲಾಯಿತು. ಕೊಪ್ಪ ಮಂಡಲ ಪಂಚಾಯ್ತಿ ರವರು ನಮ್ಮ ಶಾಲಾ ಆವರಣದಲ್ಲಿ ಬೆಳೆದಿದ್ದ ಪಸಲಿಗೆ ಸಂಬಂದಿಸಿದ ಏಳು ಸಾವಿರ ರೂ.

ಗಳನ್ನು ಪಾವತಿ ಮಾಡುವಂತೆ ಉಪಕಾರ್ಯದರ್ಶಿಗಳು ಜಿಲ್ಲಾ ಪಂ ಮೈಸೂರುರವರಿಗೆ ಕಳುಹಿಸಿದ ಮನವಿ ಮತ್ತು ಅವರುಕಳುಹಿಸಿದ ಅಧಿಕೃತ ಜ್ಞಾಪೊಲಿಸರು ನನ್ನ ಸಮಕ್ಷಮ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ನಿಪಿ33 ಎಂದು ಗುರುತಿಸಲಾಯಿತು. ಮಿಳಿಂದ ವಿ ಸಂಸ್ತೆಗೆ ಸಂಬಂದಿಸಿದ ಡೈಲಿ ನಗದು ಪುಸ್ತಕ ಇದು ಪುಟ 1 ರಿಂದ 176 ವರೆಗೆ ಇರುತ್ತದೆ. ಇದು 171ನೇ ಪುಟದವರೆಗೆ ಬರವಣಿಗೆ ಆಗಿರುತ್ತದೆ. ಇದನ್ನು ನಿಪಿ34 ಎಂದು ಗುರುತಿಸಲಾಯಿತು. ಮಿಳಿಂದ ಸಂಸ್ತೆಗೆ ಸಂಬಂದಿಸಿದ ಲೆಡ್ಜರ್ ಪುಸ್ತಕ ಪುಟ 1 ರಿಂದ 176 ವರೆಗೆ ಇರುತ್ತದೆ. ಇದು ಪುಟ 69 ವರೆಗೆ ಬರವಣಿಗೆ ಆಗಿರುತ್ತದೆ. ಇದನ್ನು ನಿಪಿ35 ಎಂದು ಗುರುತಿಸಲಾಯಿತು. ಸಂಸ್ದೆಗೆ ಹಣಕಾಸಿನ ನಿರ್ವಹಣೆಗೆ ಸಂಬಂದಿಸಿದ 1ನೇ ಪೈಲ್‌ನಲ್ಲಿ ರಶೀದಿಗಳು, ನಿಪಿ36 ಎಂದು ಗುರುತಿಸಲಾಯಿತು. ಇನ್ನೊಂದು ಪೈಲ್‌ನಲ್ಲಿನ ರಶೀದಿಗಳು ನಿಪಿ37 ಮತ್ತು ಮತ್ತೊಂದು ಪೈಲ್‌ನಲ್ಲಿನ ರಶೀದಿಗಳು, ನಿಪಿ38 ಎಂದು ಗುರುತಿಸಲಾಯಿತು. ಆರೋಪಿತನು 2006 ರಿಂದ 2009 ವರೆಗೆ ಶಾಲಾ ನಿರ್ವಹಣೆಗೆ ಬೇಕಾದ ಹಣ ಪಾವತಿಸುವಂತೆ ಸಲ್ಲಿಸಿದ ಮನವಿ ಅರ್ಜಿ ಮತ್ತು ಹಣಕಾಸಿನ ವಿವರ (43 ಪುಟಗಳು) ನಿಪಿ39 ಎಂದು ಗುರುತಿಸಲಾಯಿತು. ಕೊಪ್ಪ ಗ್ರಾಮದ ಡೊಂಗರಿ ಗರಾಸಿಯ ಕಾಲೋನಿಯ ದರ್ಮ ರವರು ರೂ.105000-00 ಗಳನ್ನು ಅವರಿಂದ ಮಿಳಿಂದ ವಿಸಂಸ್ದೆ ಪರವಾಗಿ ದೊಡ್ಡಣ್ಣರವರುಪಡೆದಿದ್ದು ಅದನ್ನು ವಾಪಸ್ಸು ಕೊಡುವಂತೆ ಪತ್ರ ಬರೆದಿದ್ದು ಇದನ್ನು ನಾವು ನಿ ಜಿಲ್ಲಾ ನ್ಯಾಯಾದೀಶರಿಗೆ ಸಲ್ಲಿಸಿರುತ್ತೇನೆ. ಈ ಬಗ್ಗೆ ಪತ್ರ ಹಾಗೂದಾಖಲೆಗಳುಇದ್ದು ಅದನ್ನು ನಿಪಿ40 ಎಂದು ಗುರುತಿಸಲಾಯಿತು. ತನಿಖಾದಿಕಾರಿಗಳಾದ ನಿವೃತ್ತ ಜಿಲ್ಲಾನ್ಯಾಯಾದೀಶರು ಪಡೆದುಕೊಂಡ ಸಾಕ್ಷಿಗಳ ಹೇಳಿಕೆಗಳು (132 ಪುಟಗಳು) ನಿಪಿ41 ಎಂದು ಗುರುತಿಸಲಾಯಿತು. ಶಿಕ್ಷಕರಿಂದ ಆರೋಪಿತನು ಹಣ ಪಡೆದು ಸಹಿ ಮಾಡಿಕೊಟ್ಟ ದಾಖಲೆಗಳು (6 ಪುಟಗಳು) ನಿಪಿ42 ಎಂದು ಗುರುತಿಸಲಾಯಿತು. ನಿವೃತ್ತ ಜಿಲ್ಲಾ ನ್ಯಾಯಾದೀಶರು ಮಿಳಿಂದ ವಿ ಸಂಸ್ದೆ ಶಾಲೆಗಳ ವ್ಯವಹಾರದ ಬಗ್ಗೆ ತನಿಖೆ ಮಾಡಿ ಸಲ್ಲಿಸಿದ 40 ಪುಟಗಳ ವರದಿ ನಿಪಿ43 ಎಂದು ಗುರುತಿಸಲಾಯಿತು. ಲೆಕ್ಕ ಪರಿಶೋಧಕರಿಗೆ ದಿಃ 09-04-2014 ರಂದು ನೀಡಿರುವ ಪತ್ರದ ಪ್ರತಿಯನ್ನು ನಿಪಿ- 44 ಎಂದು ಹಾಗೂ ಮಿಳಿಂದ ವಿದ್ಯಾ ಸಂಸ್ಧೆಗೆ ಲೆಕ್ಕ ಪರಿಶೋಧಕರು ನೀಡಿರುವ ದಿಃ 28-04-2014 ರ ವರದಿಯನ್ನು ನಿಪಿ- 45 ಎಂದು ಗುರುತಿಸಲಾಯಿತು. ಮಿಳಿಂದ ವಿದ್ಯಾಸಂಸ್ತೆಗೆ ಸಂಬಂದಿಸಿದ ರಶೀದಿ ಪುಸ್ತಕದ ದೃಡೀಕೃತ ನಕಲು (ಅದು ಒಟ್ಟು 10 ಪುಟಗಳು) ಹಾಜರ್ಪಡಿಸಿದ್ದು ಅದನ್ನು ನಿಪಿ-46 ಎಂದು ಗುರುತಿಸಲಾಯಿತು.

ಆರೋಪಿ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಾಸಾ- 1

ಆದ್ದರಿಂದ ಆರೋಪಿ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ತೆ ನ್ಯಾ ನ ಉ ಬೆ ಮಾ

ಓ ಹೇ ಕೇ ಸ ಇ ಒ

ಹಿ.ಶ್ರೇ.ಸಿ.ನ್ಯಾ ಹಾಗೂ ಪ್ರ.ವ.ನ್ಯಾ.ದಂ.
ಪಿರಿಯಾಪಟ್ಟಣ.